# ರೈತರ ಕಣ್ಣೊರೆಸಲು ಸದಾ ಸಿದ್ಧ



ರಾಜ್ಯದಲ್ಲಿ ಕಳೆದೆರಡು ವರ್ಷಗಳಲ್ಲಿ ಮಳೆಯ ಕೊರತೆ/ ಅಕಾಲಿಕ ಮಳೆಯಿಂದಾಗಿ ರೈತರು ಸಂಕಷ್ಟಕ್ಕೀಡಾಗ ಬೇಕಾಯಿತು.

ರೈತರ ಸಂಕಷ್ಟಕ್ಕೆ ಸರ್ಕಾರವು ಸಕಾಲಿಕವಾಗಿ ಸ್ಪಂದಿಸಿದೆ. ಅವರಿಗಾಗಿ ಕೈಗೊಂಡ ಹಲವಾರು ಪರಿಹಾರ ಕ್ರಮಗಳು ರೈತರಲ್ಲಿ ಆತ್ಮಸ್ಥೈರ್ಯ ಮೂಡಿಸಿತು.

'ಕೃಷಿ ಸಾಲ ಮನ್ನಾ', 'ಬೆಳೆ ನಷ್ಟ ಪರಿಹಾರ', 'ಬೆಳೆ ವಿಮೆ'ಯಂತಹ ರೈತ ಬೆಂಬಲ ಯೋಜನೆಗಳು ರೈತರಲ್ಲಿ ಹೊಸ ಭರವಸೆ ಮೂಡಿಸುವಲ್ಲಿ ಯಶಸ್ವಿಯಾಗಿವೆ.

ಇದೆಲ್ಲಕ್ಕೂ ಮಿಗಿಲಾಗಿ ಮಾಹಿತಿ ತಂತ್ರಜ್ಞಾನವನ್ನು ಅತ್ಯಂತ ಸಮರ್ಥವಾಗಿ ರೈತರಿಗಾಗಿ ಬಳಸಿಕೊಂಡ ದೇಶದ ಮೊದಲ ರಾಜ್ಯ ಕರ್ನಾಟಕ.

ಕರ್ನಾಟಕ ಸರ್ಕಾರವು ಕೃಷಿ ಮಾರುಕಟ್ಟೆ ಮಂಡಳಿಯಲ್ಲಿ  ಜಾರಿಗೊಳಿಸಿರುವ ಆನ್‌ಲೈನ್ ಹರಾಜು ಪದ್ಧತಿಯು ರಾಷ್ಟ್ರೀಯ ಮನ್ನಣೆ ಗಳಿಸಿದೆ. ಜೊತೆಗೆ, ಕೇಂದ್ರ ಸರ್ಕಾರವು ಇದನ್ನು ತನ್ನ ರಾಷ್ಟ್ರೀಯ ಕಾರ್ಯಕ್ರಮವನ್ನಾಗಿ ಅಳವಡಿಸಿಕೊಂಡಿದೆ. ಆನ್‌ಲೈನ್ ಹರಾಜಿನಿಂದಾಗಿ ರೈತರ ಕೃಷಿ ಉತ್ಪನ್ನಗಳಿಗೆ ಉತ್ತಮ ಬೆಲೆ ದೊರಕುತ್ತಿದೆ. ಈ ಯೋಜನೆ ರೈತರಲ್ಲಿ ಹರುಷದ ಹೊನಲು ಹರಿಸಿದೆ.

ಸರ್ಕಾರವು ಕರ್ನಾಟಕ ಕೃಷಿ ಮಾರಾಟ ನೀತಿ ೨೦೧೩ ಜಾರಿಗೆ ತಂದು, ಕಾಯ್ದೆ ಹಾಗೂ ನಿಯಮಗಳಿಗೆ ತಿದ್ದುಪಡಿ ತಂದಿದೆ. ಈ ತಿದ್ದುಪಡಿ ಮೂಲಕ ಸರ್ಕಾರ ಆನ್‌ಲೈನ್ ಮಾರಾಟ ವ್ಯವಸ್ಥೆಗೆ ಚಾಲನೆ ನೀಡಿದೆ. ರಾಜ್ಯದ ೧೦೩ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಆನ್‌ಲೈನ್ ಮಾರಾಟ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಲಾಗಿದೆ. ಹಾಗೆಯೇ, ರಾಜ್ಯದ ಎಲ್ಲಾ ೧೫೭ ಎಪಿಎಂಸಿಗಳಲ್ಲಿ ೮೦ ಸಾವಿರ ವರ್ತಕರು ಆನ್‌ಲೈನ್ ಖರೀದಿಯಲ್ಲಿ ಸಕ್ರಿಯರಾಗಿದ್ದಾರೆ.

ಆನ್‌ಲೈನ್ ಮಾರಾಟದಿಂದ ಪಾರದರ್ಶಕತೆ ಹೆಚ್ಚುತ್ತದೆ. ರೈತರು ಬೆಳೆದ ಬೆಳೆಗಳಿಗೆ ನ್ಯಾಯಯುತ ಬೆಲೆ ದೊರೆಯುತ್ತದೆ. ಖರೀದಿ ವ್ಯವಹಾರ ಮುಗಿದ ೨೪ ಗಂಟೆಗಳ ಒಳಗಾಗಿ ರೈತರ ಖಾತೆಗಳಿಗೆ ನೇರವಾಗಿ ಹಣ ಪಾವತಿಯಾಗುತ್ತದೆ. ಇದರಜೊತೆಗೆ, ರೈತರು ಕೃಷಿ ಮಾರುಕಟ್ಟೆಗೆ ಬರದೇ ಅವರು ಇದ್ದ ಕಡೆಯಿಂದಲೇ ಆನ್‌ಲೈನ್ ಮೂಲಕ ವಹಿವಾಟು ನಡೆಸಬಹುದಾಗಿದೆ. ದಿನದಿಂದ ದಿನಕ್ಕೆ ಹೆಚ್ಚು ಜನಪ್ರಿಯವಾಗುತ್ತಿರುವ ಈ ಆನ್‌ಲೈನ್ ಮಾರಾಟ ವ್ಯವಸ್ಥೆಯ ಪ್ರಯೋಜನವನ್ನು ಸುಮಾರು ೧೪ ಲಕ್ಷ ರೈತರು ಪಡೆದುಕೊಂಡಿದ್ದಾರೆ.

## ಆನ್‌ಲೈನ್ ಮಾರುಕಟ್ಟೆಗೆ ರಾಷ್ಟ್ರೀಯ ಮನ್ನಣೆ

ಸರ್ಕಾರ ೨೦೧೪ ರಲ್ಲಿ ಜಾರಿಗೊಳಿಸಿದ್ದ ಕೃಷಿ ಮಾರುಕಟ್ಟೆಯ ಆನ್‌ಲೈನ್ ಹರಾಜು ಪದ್ಧತಿಯ ಯಶಸ್ಸಿನಿಂದ ಪ್ರೇರಣೆ ಪಡೆದಿರುವ ಸರ್ಕಾರ ಕೆ ಕಿಸಾನ್ ಯೋಜನೆಯಡಿ ಇಲಾಖೆಯ ೭೮೩ ಕಛೇರಿಗಳಲ್ಲಿ ಯೋಜನಾ ಸೌಲಭ್ಯಗಳನ್ನು ಅಳವಡಿಸಿದ್ದು, ಅವುಗಳ ಮೂಲಕ ೧೩ ಲಕ್ಷ ರೈತರ ಮಾಹಿತಿಯನ್ನು ತಂತ್ರಾಂಶದಲ್ಲಿ (ಅಗ್ರಿಕಲ್ಚರ್ ಇನ್‌ಪುಟ್ ಸಪ್ಲೆ ಸಿಸ್ಟಮ್ ಸಾಫ್ಟ್‌ವೇರ್) ಅಳವಡಿಸಿದೆ. ಇದರಿಂದಾಗಿ ರೈತರಿಗೆ ಸಕಾಲದಲ್ಲಿ ತಾಂತ್ರಿಕ ಮಾಹಿತಿ ಮತ್ತು ಸೇವೆ ನೀಡುವುದು, ಪರಿಕರ ಲಭ್ಯತೆ, ಮಾರುಕಟ್ಟೆ ಮಾಹಿತಿ, ವಿವಿಧ ಪರಿಕರಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿಗಳ ಸ್ವೀಕೃತಿ ಮತ್ತು ವಸ್ತು ಸ್ಥಿತಿ ಬಗ್ಗೆ ರೈತರಿಗೆ ಸೇವೆಯನ್ನು ಪ್ರಾರಂಭಿಸಲಾಗಿದೆ.

ಕರ್ನಾಟಕ ರಾಜ್ಯ ಉಗ್ರಾಣ ನಿಗಮದ ಉಗ್ರಾಣಗಳ ಕಾರ್ಯಾಚರಣೆ ಮತ್ತು ನಿರ್ವಹಣೆಯನ್ನು ಸಾರ್ವಜನಿಕಖಾಸಗಿ ಸಹಭಾಗಿತ್ವದಲ್ಲಿ ಕೈಗೊಳ್ಳಲಾಗುತ್ತಿದೆ. ಸುಮಾರು ೪೦ ಕೋಟಿ ರೂ.ಗಳ ವೆಚ್ಚದಲ್ಲಿ ೨೪ ಪ್ರಮುಖ ಎಪಿಎಂಸಿ ಮಾರುಕಟ್ಟೆಗಳಲ್ಲಿ ಮಾರುಕಟ್ಟೆ ಆಧುನೀಕರಣ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಮೈಸೂರು, ಹುಬ್ಬಳ್ಳಿ, ಉಡುಪಿ, ಕಲಬುರಗಿ, ಬಳ್ಳಾರಿ, ಬೆಳಗಾವಿ, ದಾವಣಗೆರೆಯಲ್ಲಿ ಭಾನುವಾರದ ಮಾರುಕಟ್ಟೆಯಲ್ಲಿ ಅಗತ್ಯ ಮೂಲ ಸೌಕರ್ಯಗಳನ್ನು ಒದಗಿಸಲು ೭ ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗುತ್ತಿದೆ.

ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಆನ್‌ಲೈನ್ ಮಾರಾಟದಿಂದ ಪ್ರಯೋಜನ ದೊರೆಯುತ್ತಿದೆ. ಆದಾಗ್ಯೂ ಸಣ್ಣ ಪುಟ್ಟ ರೈತರು ಆನ್‌ಲೈನ್ ಮಾರಾಟ ವ್ಯವಸ್ಥೆಗೆ ಉನ್ನತೀಕರಣಗೊಳ್ಳಲು ಹಿಂದೇಟು ಹಾಕುತ್ತಿರುವುದು ಕಂಡು ಬಂದಿದೆ. ಬ್ಯಾಂಕ್ ಖಾತೆ ಹೊಂದಿಲ್ಲದಿರುವುದು ಮತ್ತು ತಂತ್ರಜ್ಞಾನದ ಬಳಕೆಯ ಬಗ್ಗೆ ಹೆಚ್ಚಿನ ಮಾಹಿತಿ ಇಲ್ಲದಿರುವುದು, ವ್ಯಾಪಾರದಲ್ಲಿ ಹೆಚ್ಚುಕಮ್ಮಿಯಾದರೆ ಎನ್ನುವ ಕಾರಣಗಳು ಇಂತಹ ರೈತರು ಹಿಂದೆ ಸರಿಯಲು ಇದ್ದ ಪ್ರಮುಖ ಕಾರಣಗಳಾಗಿದ್ದವು.

ಇಂತಹವರನ್ನು ಗುರಿಯನ್ನಾಗಿಸಿಕೊಂಡು ರಾಜ್ಯ ಕೃಷಿ ಮಾರಾಟ ಮಂಡಳಿ ವತಿಯಿಂದ ಕೃಷಿ ಉತ್ಪನ್ನಗಳನ್ನು ಆನ್‌ಲೈನ್ ಮೂಲಕ ಮಾರಾಟ ಮತ್ತು ರೈತರ ನೋಂದಣಿ ಮಾಡುವ ಪ್ರಕ್ರಿಯೆಯ ಬಗ್ಗೆ ರಾಜ್ಯದಾದ್ಯಂತ ಜಾಗೃತಿ ಮೂಡಿಸುತ್ತಿದೆ. ಆನ್‌ಲೈನ್ ಮಾರುಕಟ್ಟೆಯಲ್ಲಿ ರೈತರು ಬೆಳೆದ ಕೃಷಿ ಉತ್ಪನ್ನಗಳ ಬೆಲೆಯ ಮಾಹಿತಿ ಸಿಗಲಿದೆ. ವ್ಯವಸ್ಥೆಯು ಸಂಪೂರ್ಣ ಪಾರದರ್ಶಕತೆಯಿಂದ ಕೂಡಿದ್ದು, ಇದರಿಂದ ರೈತರ ಶೋಷಣೆಯನ್ನು ತಡೆಯಬಹುದು, ಇಲ್ಲಿ ರೈತರಿಗೆ ಮೋಸವಾಗಲು ಸಾಧ್ಯವಿಲ್ಲ ಎನ್ನುವುದಕ್ಕೆ ಒತ್ತು ನೀಡಿ ಪ್ರಚಾರವನ್ನು ನಡೆಸಿದೆ. ಇದರಿಂದ ಅನೇಕ ರೈತರನ್ನು ಸೇರ್ಪಡೆ ಮಾಡಿಕೊಳ್ಳುವಲ್ಲಿ ಎಪಿಎಂಸಿ ಯಶಸ್ವಿಯಾಗಿದೆ.